ಅ. ಮುಂಡರಗಿ ತಾಲ್ಲೂಕು ಹೆಸರೂರು ಏತ ನೀರಾವರಿ, ರಾಟೆ ಯಾತ ನೀರಾವರಿ ಯೋಜನೆಗಳ ಸ್ಥಳ ಮಾಪನ ಮತ್ತು ಅಂದಾಜು ಕಾರ್ಯವನ್ನು ಕೈಕೊಳ್ಳಲಾಗಿದಿಯೇ ;

ಆ. ಹಾಗಿದ್ದರೆ ಇದು ಯಾವ ಹಂತದಲ್ಲಿದೆ ?

ಇ. ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಬಹುದಾಗಿದೆ ;

ಈ. ನಿರ್ಮಾಣಕಾರ್ಯ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಸಂಯುಕ್ತ ಏತ ನೀರಾವರಿ ಯೋಜನೆಗೆ ಸ್ಥಳ ಮಾಪನ ಕಾರ್ಯ ಕೈಕೊಳ್ಳಲಾಗಿದೆ.

(2) ರಾಟೆ ಏತ ನೀರಾವರಿ ಯೋಜನೆಯ ಸ್ಥಳ ಮಾಪನ ಕಾರ್ಯ ತೆಗೆದುಕೊಂಡಿಲ್ಲ.

ಆ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಏತ ನೀರಾವರಿ ಯೋಜನೆಯ ಸ್ಥಳಮಾಪನ ನಡೆಯುತ್ತಿದ್ದು, ಅಂದಾಜುಗಳು ತಯಾರಾಗುತ್ತಿದೆ. ಸುಮಾರು ಇನ್ನು ಆರು ತಿಂಗಳಲ್ಲಿ ಮುಗಿಯುವ ನಿರೀಕ್ಷೆಯಿದೆ.

(2) ರಾಟೆ ಏತ ನೀರಾವರಿ ಬಗ್ಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಸಂಯುಕ್ತ ಏತ ನೀರಾವರಿ ಯೋಜನೆಯಲ್ಲಿ ಸುಮಾರು 4000 ಎಕರೆಗಳು.

(2) ರಾಟೆ ಏತ ನೀರಾವರಿ ಯೋಜನೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಆಯವ್ಯಯ ಅಂದಾಜಿನಲ್ಲಿ ಸೇರಿ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ನಿರ್ಮಾಣ ಕಾರ್ಯ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಇದರ ಬಗ್ಗೆ ನಿಮಗೂ ಕೂಡ ಕಾಗದ ಬರೆದಿದ್ದೇನೆ. ಇಲಾಖೆಯ ಅಧಿಕಾರಿಗಳಿಗೂ ಈ ಬಗ್ಗೆ ಆದೇಶವನ್ನು ನೀಡಿದ್ದೇನೆ.

ಶ್ರೀ ಕೆ.ಎಚ್. ಕುರಡ್ಡಿ.—ರಾಟೆ ಏತ ನೀರಾವರಿಯನ್ನು ಇನ್ನೂ 3–4 ತಿಂಗಳೊಳಗಾಗಿಯಾದರೂ ಈ ಅಂದಾಜನ್ನು ಪೂರ್ಣ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ರಾಟೆ ಏತ ನೀರಾವರಿ ಯೋಜನೆಯ ಸ್ಥಳ ಮಾಪನವನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಚ್. ಕುರಡ್ಡಿ.—6 ತಿಂಗಳೊಳಗಾಗಿಯಾದರೂ ಮಾಡಿ. ಏಕೆಂದರೆ ನಮ್ಮ ಭಾಗದಲ್ಲಿ ಬರಗಾಲ ಇರುವುದರಿಂದ, ಅಲ್ಲಿ ಯಾವುದೇ ನೀರಾವರಿ ಇಲ್ಲದಿರುವುದರಿಂದ, ಏತ ನೀರಾವರಿಗೆ ಆದ್ಯತೆಯನ್ನು ಕೊಟ್ಟು ಇದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಒಂದು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಮಾಡುತ್ತದೆಯೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ತಕ್ಷಣ ವರದಿ ಬಂದ ಕೂಡಲೇ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ :— ಲೋಕೋಪಯೋಗಿ ಇಲಾಖೆಯ ಹುದ್ದೆಗಳ ಬಗ್ಗೆ

ಪ್ರ. 119 (21) ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ರಾಜ್ಯದ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) ಇಲಾಖೆಯಲ್ಲಿ ಮಂಜೂರಾಗಿರುವ 1. ಚೀಫ್ ಎಂಜನಿಯರ್ 2. ಸೂಪರಿಂಟೆಂಡಿಂಗ್ ಎಂಜನಿಯರ್ 3. ಎಕ್ಸಿಕ್ಯೂಟಿವ್ ಎಂಜನಿಯರ್ 4. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ 5. ಅಸಿಸ್ಟೆಂಟ್ ಇಂಜನಿಯರ್ ಹುದ್ದೆಗಳ ಮಾಹಿತಿಯನ್ನು ಒದಗಿಸುವುದು ;

ಆ. ವರ್ಕ್ಸ್ ಇನ್‌ಸ್ಪೆಕ್ಟರ್ ಇತರ ಹುದ್ದೆಗಳು ಪ್ರತಿ ಜಿಲ್ಲಾವಾರು ಎಷ್ಟೆಷ್ಟು ಇರುತ್ತವೆ ?

ಇ. ಪ್ರತಿ ಜಿಲ್ಲೆಗಳಲ್ಲಿ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) 80–81, 81–82, 82–83ನೇ ಸಾಲುಗಳನ್ನು ಕೆಲಸಕಾರ್ಯಗಳಿಗಾಗಿ ಮಾಡಿರುವ ಖರ್ಚಿನ ಹಣದ ಮೊತ್ತವೆಷ್ಟು ?

ಈ. ಪ್ರತಿ ಜಿಲ್ಲೆಗಳಲ್ಲಿ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) 80–81, 81–82, 82–83ನೇ ಸಾಲುಗಳಲ್ಲಿ ಚೀಫ್ ಇಂಜಿನಿಯರಿಂದ ಹಿಡಿದು ಮೈಲಿ ಕೂಲಿಯವರೆಗೆ ಎಲ್ಲಾ ನೌಕರರಿಗೆ ಕೊಟ್ಟಿರುವ ಪಗಾರ, ಭತ್ಯ ಇತ್ಯಾದಿ ಬಗ್ಗೆ ಕೊಟ್ಟಿರುವ ಖರ್ಚಿನ ಹಣದ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :—

ಅ. 1. ಚೀಫ್ ಇಂಜಿನಿಯರುಗಳು 1
2. ಸೂಪರಿಂಟೆಂಡಿಂಗ್ ಎಂಜಿನಿಯರುಗಳು 11
3. ಎಕ್ಸಿಕ್ಯೂಟಿವ್ ಎಂಜಿನಿಯರುಗಳು 46
4. ಎಸಿಸ್ಟೆಂಟ್ ಎಕ್ಸಿಕ್ಯೂಟಿವ್ ಎಂಜಿನಿಯರುಗಳು 270
5. ಎಸಿಸ್ಟೆಂಟ್ ಎಂಜಿನಿಯರುಗಳು 662

ಆ. ವಿವರ ಪಟ್ಟಿಯನ್ನು ಇದರ ಸಂಗಡ ಲಗತ್ತಿಸಿದೆ.

ಇ. ವಿವರ ಪಟ್ಟಿಯನ್ನು ಇದರ ಸಂಗಡ ಲಗತ್ತಿಸಿದೆ.

ಈ. ವಿವರ ಪಟ್ಟಿಯನ್ನು ಇದರ ಸಂಗಡ ಲಗತ್ತಿಸಿದೆ.

I

STATEMENT SHOWING THE DISTRICTWISE POSTS OF WORK INSPECTORS IN THE COMMUNICATIONS & BUILDINGS ZONE

Sl. No.	Name of the District	Work Inspectors	Junior Work Inspectors	Senior Work Inspectors	Total
1.	Bangalore	—	86	79	165
2.	Tumkur	—	74	11	85
3.	Kolar	—	39	11	50
4.	Mysore	—	49	7	56
5.	Mandya	—	11	10	21
6.	Belgaum	13	—	117	130
7.	Bijapur	3	—	43	46
8.	North Kanara	60	—	—	60
9.	Dharwad	102	—	—	102
10.	Bellary	—	7	42	49
11.	Raichur	—	—	72	72
12.	Gulbarga	—	43	13	56
13.	Bidar	—	2	5	7
14.	South Kanara	—	6	6	12
15.	Coorg	—	25	4	29
16.	Shimoga	—	26	6	32
17.	Chitradurga	—	10	1	11
18.	Hassan	—	32	1	33
19.	Chickmagalur	—	4	1	5
	Total :	**178**	**414**	**429**	**1021**

II

STATEMENT SHOWING THE SANCTIONED STRENGTH OF OTHER POSTS UNDER REGULAR ESTABLISHMENT IN THE ZONE OF CHIEF ENGINEER, COMMUNICATIONS & BUILDINGS, AS ON 1-8-1983

Sl. No.	Category of Posts	Sanctioned strength
1	2	3
1.	Junior Engineer (Civil)	880
2.	Junior Engineer (Electrical)	26
3.	Registrar	11
4.	Manager Gr. I	12
5.	Superintendent Gr. I	46
6.	Accounts Superintendent	43
7.	Store Superintendent	7
8.	Head Draftsman	6
9.	Draftsman	431
10.	Stenographer	55
11.	First Division Clerk	348
12.	First Division Accounts Clerk	175
13.	First Division Store Keeper	35
14.	Senior Statistical Assistant	10
15.	First Divison Revenue Surveyor	34
16.	Second Division Clerk	729
17.	Second Division Accounts Clerk	130
18.	Second Division Store Keeper	25
19.	Junior Statistical Assistant	39
20.	Typists	162
21.	Tracer	101
22.	Blue Printer	12
23.	Driver	37
24.	Computor	4
25.	Telephone operator	5
26.	Jamedar	1
27.	Attender	57
28.	Watchman	205
29.	Peon	743
30.	Nalamangar	15
31.	Khalasi	17
32.	Maity	54
33.	Cook	18
34.	Sweeper/Scavenger/Thoty	61
35.	Foreman	1
36.	Gardener	3
37.	Watchman	30
38.	Patkari	7
39.	Carpenter	5

III

EXPENDITURE ON COMMUNICATIONS & BUILDINGS FOR THE YEAR 1980-81, 1981-82 & 1982-83

(Rs. in lakhs)

Sl. No.	Name of District	1980–81		1981–82		1982–83	
		Buildings	Communi-cations	Buildings	Communi-cattions	Buildings	Communi-cattions
1	2	3	4	5	6	7	8
1.	Bangalore	669.81	192.74	898.60	282.59	1044.18	251.27
2.	Belgaum	56.38	240.18	50.17	263.76	79.92	206.98
3.	Bellary	61.67	221.61	76.74	203.05	103.73	187.54
4.	Bidar	46.95	109.94	53.00	98.33	90.87	134.14
5.	Bijapur	40.44	243.18	67.29	317.76	82.98	269.67
6.	Chickmagalur	23.97	123.21	23.65	133.13	46.21	155.66
7.	Chitradurga	48.07	151.86	49.73	156.98	75.45	168.51
8.	Dakshina Kannada	81.46	297.46	87.66	308.82	110.28	323.65
9.	Dharwar	56.41	242.01	87.56	275.31	138.41	200.31

1	2	3	4	5	6	7	8
10.	Gulbarga	98.38	200.71	88.72	317.94	122.98	246.84
11.	Hassan.	25.82	183.73	44.81	171.20	69.44	153.13
12.	Kodagu	17.24	101.97	31.90	108.89	58.57	133.89
13.	Kolar	59.24	175.03	68.14	268.07	96.62	240.39
14.	Mandya	29.86	172.39	27.51	177.92	59.75	190.26
15.	Mysore	147.08	309.29	186.02	292.21	116.46	330.90
16.	Raichur	61.57	194.76	69.77	227.62	94.62	233.93
17.	Shimoga	29.07	208.67	45.47	241.98	64.02	199.43
18.	Tumkur	40.38	178.81	54.14	254.59	71.76	258.16
19.	Uttara Kannada	49.39	172.33	43.56	191.31	73.50	191.92
	Total	1643.19	3719.98	2054.44	4290.66	2599.45	4066.57

IV

STATEMENT SHOWING THE ESTABLISHMENT CHARGES FOR THE YEAR 1980-81 AND 1981-82 (DISTRICTWISE) AND ANTICIPATED FOR THE YEAR 1982-83.

(Rupees in lakhs).

Sl. No.	Name of the District	Establishment charges during		
		1980-81	1981-82	1982-83 (anticipated as per FRA)
1.	Bangalore	78.24	98.74	
2.	Belgaum	28.31	36.69	
3.	Bellary	33.24	41.97	
4.	Bidar	28.71	36.71	
5.	Bijapur	10.99	18.95	
6.	Chikmagalur	15.35	17.72	
7.	Chitradurga	21.33	32.81	
8.	Dakshina Kannada	35.49	46.22	
9.	Dharwad	44.27	61.40	
10.	Gulbarga	24.58	46.07	Distrsct-wise
11.	Hassan	24.19	27.29	figures are
12.	Kodagu	13.44	13.91	bcing compiled.
13.	Kolar	33.56	33.31	
14.	Mandya	40.11	71.50	
15.	Mysore	52.58	65.82	
16.	Raichur	19.24	30.83	
17.	Shimoga	28.21	35.88	
18.	Tumkur	28.23	41.00	
19.	Uttara Kannada	34.48	44.41	
20.	Add Circle Office & Chief Engineer (C & B) 's office establishment charges.	91.45	108.13	
Total for the State		686.00	899.36	1124.44*

*The increase in expenditure during 1982-83 as against 1981-82, is due to increase in allowances and also due to absorption of a part of work charged establishment into regular establishment.

Note :—The establishment of Superintending Engineers, Executive Engineers, Assistant Executive Engineers etc., are for C & B zone as well as Minor Irrigation Zone.

ಶ್ರೀ ಬಿ. ಜಿ. ಬಣಕಾರ್.—ನಮ್ಮ ಇಡೀ ರಾಜ್ಯದಲ್ಲಿ ಪ್ರತಿ ತಾಲ್ಲೂಕುಗಳಲ್ಲಿ ಸುಮಾರು 16 ಜನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತ, ಸಹಾಯಕ ಅಭಿಯಂತ ಹಾಗೂ ಕಿರಿಯ ಅಭಿಯಂತ ಇಷ್ಟು ಜನ ಇದ್ದರೂ ಕೂಡ ಯಾವುದೇ ಒಂದು ಕೆಲಸವನ್ನು ಟೆಂಡರ್ ಕರೆಯದೇ ಶೇಕಡ 60ರಷ್ಟನ್ನು ಕಾಮಗಾರಿಯನ್ನು ಆ ಇಂಜೀನಿಯರ್ಸ್ ತಮಗೆ ಬೇಕು ಬೇಕಾದವರಿಗೆ, ಪೀಸ್‌ವರ್ಕ್ ಆಧಾರದ ಮೇಲೆ ಕೊಡುತ್ತಿದ್ದಾರೆ. ಪ್ರತಿಯೊಂದು ಕಾಮಗಾರಿ ಕೆಲಸವನ್ನೂ ಕೂಡ ಟೆಂಡರ್ ಕರೆದು ಕೊಡುವುದಕ್ಕೆ ಇರುವಂತಹ ತೊಂದರೆಯಾದರೂ ಏನು ?

ಶ್ರೀ ಹೆಚ್. ಡಿ. ದೇವೇಗೌಡ.—ನಾವು ಇಟ್ಟಿರತಕ್ಕಂತಹ ಸಿಬ್ಬಂದಿಗೂ ಕೆಲಸ ತೆಗೆದುಕೊಳ್ಳುವುದಕ್ಕೂ ನಿಜವಾಗಿಯೂ ಸಂಬಂಧ ಇಲ್ಲ. ಈಗ ಇರತಕ್ಕಂತಹ ನಿಯಮದ ಪ್ರಕಾರ, 25 ಸಾವಿರಕ್ಕಿಂತ ಒಳಪಟ್ಟು ಇರತಕ್ಕಂತಹ ಅಂದಾಜುಗಳು ಏನಿವೆ, ಆ ಎಲ್ಲ ಕೆಲಸಗಳನ್ನೂ ಪೀಸ್ ವರ್ಕ್ ಆಧಾರದ ಮೇಲೆ ಕೊಡತಕ್ಕಂತಹ ಆಧಾರವನ್ನು ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಆ ವ್ಯಾಪ್ತಿಯಲ್ಲಿ ಅವರು ಕೆಲಸವನ್ನು ಮಾಡುತ್ತಿದ್ದಾರೆ. 25 ಸಾವಿರಕ್ಕಿಂತ ಮೇಲ್ಪಟ್ಟು ಇರತಕ್ಕಂತಹ ಅಂದಾಜು ಕಾಮಗಾರಿಯನ್ನು ಅನುಸರಿಸುತ್ತಿದ್ದಾರೆ. ಒಂದು ವೇಳೆ ಎಲ್ಲ ಕೆಲಸವನ್ನೂ ಇಲಾಖೆಯ ಮತಿಯಿಂದಲೇ ಮಾಡಬೇಕೆಂದರೂ ಸಾಧ್ಯವಾಗುವುದಿಲ್ಲ. ಏಕೆಂದರೆ ಕೊಟ್ಟಿರತಕ್ಕಂತಹ ಸಿಬ್ಬಂದಿ 662 ಇದ್ದರೂ ಕೂಡ ಒಂದು ಸಬ್ ಡಿವಿಜನ್‌ಗೆ 3 ಜನ ಬರುತ್ತಾರೆ. ಈಗ ಇರತಕ್ಕಂತಹ ಸಿಬ್ಬಂದಿಯ ಗಾತ್ರ ಅಷ್ಟೇನೂ ದೊಡ್ಡದಲ್ಲ. ಆ ಕೆಲಸಕ್ಕೆ ಅನುಗುಣವಾಗಿ ಸಿಬ್ಬಂದಿಯನ್ನು ಕೊಟ್ಟಿದ್ದೇವೆ.

ವಿಷಯ :– ಮಾಲೂರು ತಾಲ್ಲೂಕಿನಲ್ಲಿ ಸಫಾರಿ ಉದ್ಯಾನವನ.

ಪ್ರಶ್ನೆ 120(25) ಶ್ರೀ ಎ. ನಾಗರಾಜು (ಮಾಲೂರು).—(ಮಾನ್ಯ ಸದಸ್ಯರು ಹಾಜರಿರಲಿಲ್ಲ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಮಾಲೂರು ತಾಲ್ಲೂಕಿನಲ್ಲಿ ಸಫಾರಿ ಉದ್ಯಾನವನವನ್ನು ತೆರೆಯಲು ಅಡಿಗಲ್ಲನ್ನಿಡಲಾಗಿದೆಯೇ ;

ಆ. ಹಾಗಿದ್ದಲ್ಲಿ ಅದನ್ನು ಪ್ರಾರಂಭಿಸಲು ಸರಕಾರದವರು ಕೈಗೊಂಡ ತ್ವರಿತ ಕ್ರಮಗಳೇನು ?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು) :—

ಅ. ಇಲ್ಲ,

ಆ. ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ರಾಜ್ಯದ ಕೈಗಾರಿಕಾ ನೀತಿ.

ಪ್ರಶ್ನೆ 121(26) ಶ್ರೀ ಜಿ. ಎಸ್. ದೊಡ್ಡಮೇಟಿ (ರೋಣ್).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ರಾಜ್ಯದಲ್ಲಿ ಕೈಗಾರಿಕೆಯಲ್ಲಿ ತೀರಾ ಹಿಂದುಳಿದ ಪ್ರದೇಶಗಳು ಯಾವುವು ಎನ್ನುವುದನ್ನು ಸರ್ಕಾರದವರು ಗುರುತಿಸಿದ್ದಾರೆಯೆ ;

ಆ. ಹಾಗಿದ್ದಲ್ಲಿ ಆ ಪ್ರದೇಶಗಳು ಯಾವುವು ;

ಇ. ಈ ದಿಶೆಯಲ್ಲಿ ಸರ್ಕಾರದವರು ಕೈಕೊಂಡ ತುರ್ತು ಕ್ರಮಗಳಾವುವು ?

ಎಸ್. ಆರ್. ಬೊಮ್ಮಾಯಿ (ಕೈಕಾರಿಕಾ ಮಂತ್ರಿಗಳು) :—

ಅ. ಹೌದು.

ಆ. 77 ತಾಲ್ಲೂಕುಗಳನ್ನು ಅತಿ ಹೆಚ್ಚು ಕೈಗಾರಿಕಾ ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಲಾಗಿದೆ, ಅನುಬಂಧಗಳನ್ನು ನೋಡಿ.

ಇ. 1–11–82ರಿಂದ ರಾಜ್ಯಾದ್ಯಂತ ಹೊಸ ಪ್ರೋತ್ಸಾಹ ಕ್ರಮಗಳು ಮತ್ತು ರಿಯಾಯಿತಿಗಳನ್ನು ಜಾರಿಗೆ ತರಲಾಗಿದೆ. 40 ತಾಲ್ಲೂಕುಗಳಲ್ಲಿ ಹೂಡಲಾಗುವ ಕೈಗಾರಿಕಾ ಬಂಡವಾಳಗಳು ರಾಜ್ಯ ಸರ್ಕಾರದಿಂದ ಸಬ್ಸಿಡಿ ಮತ್ತು ಸಾಲ ರೂಪಗಳಲ್ಲಿ ಹೆಚ್ಚು ಆರ್ಥಿಕ ಸಹಾಯಕ್ಕೆ ಲಭ್ಯವಾಗುತ್ತದೆ. ಉಳಿದ 37 ತಾಲ್ಲೂಕುಗಳಿಗೆ ಕೇಂದ್ರ ಸರ್ಕಾರದಿಂದ ಸಹಾಯ ಧನ ಲಭಿಸುತ್ತಿದೆ.